ಸಿ ಸಿ ನಂ. 282/2022

ಸಾಕ್ಷಿಗೆ ದಿನಾಂಕ 03-09-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

ಹೆಚ್ ಎಂ ಯೋಗೀಶ ಬಿನ್ P.W.1
ಹೆಚ್ ಎಂ ಪಾಲಾಕ್ಷಯ್ಯ

ಪಾಟೀ ಸವಾಲು. ಆರೋಪಿ ಪರ ಶ್ರೀ ವಿ ಎನ್ ವಕೀಲರಿಂದಃ-

ನಾನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಲಬೂರಿನಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ. ಆರೋಪಿಯು ನನ್ನ ಸಂಬಂಧಿಕ. ಆರೋಪಿಯು ನನಗೆ ಸಂಬಂಧದಲ್ಲಿ ಸಹೋದರ. ಆರೋಪಿತನಿಗೆ ನಾನು ಸಾಲವನ್ನು ಕೊಟ್ಟಾಗ ನಾನು ಮತ್ತು ಆರೋಪಿತ ಮಾತ್ರ ಇದ್ದೆವು. ನಾನು ಏಕಗಂಟಿನಲ್ಲಿ ಆರೋಪಿತನಿಗೆ ರೂ. 9 ಲಕ್ಷ ಸಾಲವನ್ನು ಕೊಟ್ಟಿರುತ್ತೇನೆ. ನಾನು ರೂ.500 ಮುಖಬೆಲೆಯ ನೋಟುಗಳ ಮೂಲಕ ಆರೋಪಿತನಿಗೆ ರೂ.9 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ನಾನು ನನ್ನ ಪಿರ್ಯಾದಿನಲ್ಲಿ ನನ್ನ ಗೃಹಕೃತ್ಯದ ಅಡಚಣೆಗಾಗಿ ನನ್ನ ಸಂಬಳದ ಮೇಲೆ ರೂ.12 ಲಕ್ಷಗಳ ಸಾಲವನ್ನು ಪಡೆದುಕೊಂಡಿರುವುದಾಗಿ ಬರೆಸಿರುತ್ತೇನೆಂದರೆ ಸರಿ. ನಾನು ಬ್ಯಾಂಕಿನಿಂದ ಹಣವನ್ನು ತೆಗೆದ ದಿನವೇ ಆರೋಪಿತನಿಗೆ ಹಣವನ್ನು ಕೊಟ್ಟಿರುತ್ತೇನೆ. ನಾನು ಬ್ಯಾಂಕಿನಿಂದ ಹಣವನ್ನು ತೆಗೆದು ಆರೋಪಿತನಿಗೆ ಕೊಟ್ಟಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ